ದಿನಾಂಕಃ 03-11-2023 ರಂದು (ಪಿ.ಡಬ್ಲ್ಯೂ.3) ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.
ಮುಂದುವರೆದ ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರವರಿಂದ

ಮುಂದುವರೆದ ಮುಖ್ಯ ವಿಚಾರಣೆ ಇಲ್ಲ ಎಂದು ಹೇಳಿರುತ್ತಾರೆ.

ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಬಾಬುರಾವ ಮಂಗಾಣೆ ವಕೀಲರಿಂದ

6. ದಿನಾಂಕಃ 30-10-2010 ರಂದು ನಮ್ಮ ಕಛೇರಿಯಿಂದ ಲೋಕಾಯುಕ್ತ ಕಛೇರಿಗೆ ಹೋಗಲು ನಮ್ಮನ್ನು ನಿಯೋಜನೆ ಮಾಡಿದ ಬಗ್ಗೆ ಯಾವುದೇ ದಾಖಲಾತಿ ಇಲ್ಲ ಎಂದರೆ ಸರಿ. ಆರೋಪಿ ಏನು ಕೆಲಸ ಮಾಡುತ್ತಾನೆ ಎಂದು ನನಗೆ ಗೊತ್ತಿಲ್ಲ. ಕೋರ್ಟಿಗೆ ಬಂದ ನಂತರ ಆತ ಗ್ರಾಮ ಲೇಖಾಧಿಕಾರಿಯಾಗಿ ಕೆಲಸ ಮಾಡುತ್ತಿದ್ದಾನೆ ಎಂದು ಗೊತ್ತಾಯಿತು. ಫಿರ್ಯಾದಿದಾರ ನನ್ನ ಸಮಕ್ಷಮ ಆರೋಪಿಯ ಜೊತೆಗೆ ಫೋನ್ ಮುಖಾಂತರ ಯಾವುದೇ ಮಾತುಕತೆ ಆಡಿಲ್ಲ ಎಂದರೆ ಸರಿ. ಫಿರ್ಯಾದಿದಾರನ ಕೆಲಸ ಆರೋಪಿ ಬಳಿ ಬಾಕಿ ಇತ್ತು ಎನ್ನುವ ಬಗ್ಗೆ ನಾನು ದಾಖಲೆ ನೋಡಿಲ್ಲ. ಜಿಲ್ಲಾಧಿಕಾರಿ ಕಛೇರಿಯಲ್ಲಿ 2 ಎಕರೆ ಜಮೀನನ್ನು ಭೂ-ಪರಿವರ್ತನೆ ಮಾಡಲು ಫಿರ್ಯಾದಿದಾರ ಅರ್ಜಿ ಕೊಟ್ಟಿದ್ದು ಇತ್ತು. ಆ ಕಡತ ಜಿಲ್ಲಾಧಿಕಾರಿಯವರ ಕಛೇರಿಯಿಂದ ಸಹಾಯಕ ಆಯುಕ್ತರ ಕಛೇರಿಗೆ ಬಂದಿತ್ತು ಎಂದು ಗೊತ್ತಿದೆ. ಫಿರ್ಯಾದಿದಾರ ಹೇಳಿದ್ದರಿಂದ ಮತ್ತು ಆತ ಕೊಟ್ಟ ದೂರನ್ನು ನೋಡಿದ್ದರಿಂದ ಆ ವಿಚಾರ ಗೊತ್ತಾಯಿತು.

7. ನನ್ನ ವಿಚಾರಣೆ ದಿನಾಂಕಃ 06-09-2018 ರಂದು ಅಪರ ನಿಭಂದಕರು-13 ಲೋಕಾಯುಕ್ತ ಕಛೇರಿ ಬೆಂಗಳೂರಿನಲ್ಲಿ ಆಗಿದೆ. ಅಲ್ಲಿ ಆದಂತಹ ವಿಚಾರಣೆ ಪ್ರತಿಯನ್ನು ಈಗ ನೋಡುತ್ತಿದ್ದು ಅದಕ್ಕೆ ನಾನು ಸಹಿ ಮಾಡಿದ್ದೇನೆ. ಫಿರ್ಯಾದಿದಾರ ಮತ್ತು ಕಛೇರಿಯ ಬೇರೆಯವರ ಜೊತೆಗೆ ಸಂಭಾಷಣೆಯನ್ನು ಕೇಳಿದ ಬಗ್ಗೆ ಬೆಂಗಳೂರು ಲೋಕಾಯುಕ್ತ ಕಛೇರಿಯ ವಿಚಾರಣೆ ಕಾಲದಲ್ಲಿ ಹೇಳಿಲ್ಲ ಯಾಕೆಂದರೆ ಆ ವಿಚಾರವನ್ನು ಅಲ್ಲಿ ಕೇಳಿಲ್ಲ. ಲೋಕಾಯುಕ್ತ ಪೊಲೀಸ ಕಛೇರಿಗೆ ಹೋದಾಗ ಸ್ವಲ್ಪ ಹೊತ್ತು ಕುಳಿತ ನಂತರ ಇವತ್ತು ಟ್ರ್ಯಾಪ ಮಾಡಲು ಆಗುವುದಿಲ್ಲ ಹೋಗಿ ಎಂದು ಪೊಲೀಸರು ಹೇಳಿದರು ಎಂದು ಬೆಂಗಳೂರು ಲೋಕಾಯುಕ್ತ ಕಛೇರಿ ವಿಚಾರಣೆಯಲ್ಲಿ ನಾನು ಹೇಳಿಲ್ಲ ಎಂದರೆ ಈಗ ನೆನಪಿಲ್ಲ. ನಾನು ಲೋಕಾಯುಕ್ತ ಕಛೇರಿ ಬೆಂಗಳೂರಿನಲ್ಲಿ ಕೊಟ್ಟಂತಹ ಹೇಳಿಕೆಯನ್ನು ಈಗ ನೋಡುತ್ತಿದ್ದು ಅದನ್ನು ನಿ.ಡಿ.1 ಎಂದು ಗುರುತಿಸಲಾಯಿತು. ಕೆಲವು ವರ್ಷಗಳಾದ ನಂತರ ಪಂಚನಾಮೆಗೆ ಸಹಿ ಮಾಡಿದ್ದೇನೆ ಎಂದು ವಿಚಾರಣೆಯಲ್ಲಿ ಹೇಳಿದ್ದೇನೆ, ಧ್ವನಿಮುದ್ರಣ ಕೇಳಿಸಲಾಗಿ ಇಬ್ಬರದು ಧ್ವನಿ ಇದೆ ಎಂದು ಹೇಳಿದ್ದೇನೆ ಯಾರ ಧ್ವನಿ ಎಂದು ಹೇಳಿಲ್ಲ.

8. ಆರೋಪಿ ಮತ್ತು ಫಿರ್ಯಾದಿದಾರ ಮಾತನಾಡಿದ್ದು ಅದು ಧ್ವನಿ ಮುದ್ರಣವಾಗಿದ್ದು ಧ್ವನಿ ಮುದ್ರಣದಲ್ಲಿ ಆರೋಪಿಯು ನಿಮ್ಮ ಊರಿನ ವಿ.ಎ. ಸಿದ್ದಯ್ಯ ಅವರನ್ನು ಬೇಟಿಯಾಗಿರಿ ಅವರ ಜೊತೆ ಮಾತಾಡಿ ಕೆಲಸ ಮುಗಿಸಿಕೊಳ್ಳಿ ಎಂದು ಹೇಳಿದ್ದಾಗಿ ಹೇಳಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮರು ದಿವಸ ಫಿರ್ಯಾದಿದಾರರು ಸಿದ್ದಯ್ಯ ಸ್ವಾಮಿ ಅವರಿಗೆ ಬೇಟಿಯಾದಾಗ ಗುರುಪಾದಪ್ಪ ಪಾಟೀಲ ರವರು ರೂ.30,000/- ಕೇಳಿರುತ್ತಾರೆ ಆದರೆ ವಿ.ಎ.ಸಿದ್ದಯ್ಯ ಸ್ವಾಮಿ ನಾನು ರೂ.25,000/- ಕೆಲಸ ಮಾಡಿಸಿಕೊಡುತ್ತೇನೆ ಎಂದು ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿ-2 ವಿ.ಎ. ನೀವು ಹಣ ಕೊಟ್ಟರೆ ಕೆಲಸ ಆಗುತ್ತದೆ ಇಲ್ಲ ಅಂದರೆ ಇಲ್ಲ ಎಂದು ಹೇಳಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ದಿನ ಸಾಯಂಕಾಲ ಫಿರ್ಯಾದಿದಾರ ಶಿವಶಂಕರ ಅವರು ಫೋನ್ ಮಾಡಿ ವಿ.ಎ. ಸಿದ್ದಯ್ಯ ಸ್ವಾಮಿ ರವರಿಗೆ ಹಣ ಕೊಡುವದಾಗಿ ತಿಳಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಇನ್ನೊಂದು ಧ್ವನಿ ಮುದ್ರಣದಲ್ಲಿ ನಿಮ್ಮ ಕೆಲಸ ಆಗಲು ರೂ.30,000/- ಹೇಳಿರುತ್ತಾರೆ ಆದರೆ ನಾನು ರೂ.25,000/- ಕೊಡಿಸುತ್ತೇನೆ ಎಂದು ಹೇಳಿರುತ್ತೇನೆ ಎಂದು ಕೇಳಿಸಿಕೊಂಡೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವೈಸ ರಿಕಾರ್ಡನಲ್ಲಿದ್ದಂತಹ ಸಂಭಾಷಣೆಯನ್ನು ಲಿಖಿತವಾಗಿ ಪೇಪರನಲ್ಲಿ ಬರೆದು ನಮ್ಮ ಸಹಿ ಪಡೆದುಕೊಂಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಸಂಭಾಷಣೆಯ ಸಿ.ಡಿ. ಮಾಡಿಲ್ಲ. ಲೋಕಾಯುಕ್ತ ಪೊಲೀಸರು ಫಿರ್ಯಾದಿದಾರರಿಗೆ ರೂ.1,000/- ಕೊಟ್ಟರು ಆ ಬಗ್ಗೆ ನಮ್ಮ ಸಮಕ್ಷಮ ಡೆಮೋ ಪಂಚನಾಮೆ ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಲೋಕಾಯುಕ್ತ ಇನ್ಸಪೇಕ್ಟರ ರವರು ಯಾಕೆ ಏನಾಯಿತು ಎಂದು ಕೇಳಿದಾಗ 2 ದಿವಸ ಆದ ನಂತರ ಹೇಳುತ್ತೇನೆ ಈಗ ಹೋಗಿ ಎಂದು ತಿಳಿಸಿದ್ದಾಗಿ ತಿಳಿಸಿರುತ್ತಾರೆ ಮತ್ತೆ ಲೋಕಾಯುಕ್ತ ಇನ್ಸಪೇಕ್ಟರ ರವರು ಫಿರ್ಯಾದಿದಾರರಿಗೆ ಫೋನ್ ಮಾಡಿ ನೀವು ಸಿದ್ದಯ್ಯಸ್ವಾಮಿಗೆ ಮಾತನಾಡಿ ಎಂದು ಹೇಳಿದರು, ಫಿರ್ಯಾದಿ ಶಿವಶಂಕರ ಅವರು ವಿ.ಎ. ಸಿದ್ದಯ್ಯ ಸ್ವಾಮಿಗೆ ಮಾತನಾಡಿದಾಗ ನಾನು ಗುರುಪಾದಪ್ಪ ಪಾಟೀಲ ರವರಿಗೆ ನಿಮ್ಮ ಕೆಲಸದ ಬಗ್ಗೆ ಹೇಳಿರುತ್ತೇನೆ ಹೋಗಿ ಬೇಟಿಯಾಗಿ ಎಂದು ಹೇಳಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಲೋಕಾಯಕ್ತ ಇನ್ಸಪೇಕ್ಟರವರು ಫಿರ್ಯಾದಿದಾರರಿಗೆ ಯಾಕೇ ಏನಾಯಿತು ಎಂದು ಕೇಳಿದಾಗ ಆರೋಪಿ ನಂ.1 ಗುರುಪಾದಪ್ಪ ಪಾಟೀಲ ರವರು ಡಿ.ಸಿ. ಕಛೇರಿಯಿಂದ ನಿಮಗೆ ಸಂಬಂಧಪಟ್ಟ ಕಡತ ತರಿಸಿ ಮತ್ತೋಮ್ಮೆ ನೋಡುತ್ತೇನೆ, ಚೆಕ್ಕು ಬಂದಿ ಪರಿಶೀಲನೆ ಮಾಡುತ್ತೇನೆ 2-3 ದಿನಗಳ ನಂತರ ನಿಮಗೆ ತಿಳಿಸುತ್ತೇನೆ ಎಂದು ಹೇಳಿದ್ದನ್ನ ನನಗೆ ಇನ್ಸಪೇಕ್ಟರ ಹೇಳಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಫಿರ್ಯಾದಿದಾರನಿಗೆ ಸಂಬಂಧಪಟ್ಟ ಕಾಗದ ಪತ್ರಗಳನ್ನು ಸಹಾಯಕ ಆಯುಕ್ತರ ಕಛೇರಿಯಲ್ಲಿ ನಾನು ನೋಡಿಲ್ಲ. ನಾವು ವಿ.ಎ. ಸಿದ್ದಯ್ಯ ಸ್ವಾಮಿಗೆ ಫೋನ್ ಮಾಡಿದಾಗ ಅವರು ನೀವು ಮತ್ತೆ ಬೇಟಿಯಾಗಿ ನಿಮ್ಮ ಕೆಲಸದ ಬಗ್ಗೆ ಹೇಳಿದ್ದೇನೆ ಎಂದು ತಿಳಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕಃ 30.10.2010 ರಂದು ನಾನು ಸಾಯಂಕಾಲ 6-00 ಗಂಟೆಗೆ ಮನೆಗೆ ಹೋದೆನು.

9. ನನ್ನ ಸಮಕ್ಷಮ ಲೋಕಾಯುಕ್ತ ಪೊಲೀಸರು ಯಾವುದೇ ವಸ್ತುಗಳನ್ನು ಜಪ್ತಿಪಡಿಸಿಕೊಂಡಿಲ್ಲ. ಲೋಕಾಯುಕ್ತ ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.